ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 24-5-2017

## ಪತ್ರಿಕಾ ಆಮಂತ್ರಣ

**1. ಬೆಳೆ ವಿಮೆ – ಸಮಸ್ಯೆ ಮತ್ತು ಪರಿಹಾರಗಳು ಕಾರ್ಯಾಗಾರ:**

**ಉದ್ಘಾಟನೆ:**

**ಶ್ರೀ ಜಿ. ಸತೀಶ್, ಐ.ಎಫ್.ಎಸ್,**
**ಆಯುಕ್ತರು, ಕೃಷಿ ಇಲಾಖೆ,**

**ಅಧ್ಯಕ್ಷತೆ:**
**ಡಾ: ಎಂ. ಮಲ್ಲಪ್ಪ,**
**ಅಧ್ಯಕ್ಷರು, ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು**

**ಮುಖ್ಯ ಅತಿಥಿಗಳು:**
**ಬಿ.ವೈ. ಶ್ರೀನಿವಾಸ್,**
**ನಿರ್ದೇಶಕರು, ಕೃಷಿ ಇಲಾಖೆ**

**ದಿನಾಂಕ: 25-5-2017 ಗುರುವಾರ, ಸಮಯ: ಬೆಳಿಗ್ಗೆ 11-00 ಗಂಟೆಗೆ**
**ಸ್ಥಳ: ಹೆಚ್.ಆರ್. ಅರಕೇರಿ ಆಡಿಟೋರಿಯಂ, ಕೃಷಿ ತಂತ್ರಜ್ಞರ ಸಂಸ್ಥೆ, ನಂ. 15 ಕ್ವೀನ್ಸ್ ರಸ್ತೆ, ಬೆಂಗಳೂರು -560 052**

## ಪತ್ರಿಕಾ ಪ್ರಕಟಣೆ

## 30 ರಂದು 'ಡಿ' ಫಾರ್ಮ ಮರುಪರೀಕ್ಷೆ

ಬೆಂಗಳೂರು, ಮೇ 24 (ಕರ್ನಾಟಕ ವಾರ್ತೆ)-

ಪ್ರಶ್ನೆ ಪತ್ರಿಕೆ ಪುನರಾವರ್ತನೆಯಾಗಿರುವುದ ಹಿನ್ನಲೆಯಲ್ಲಿ ರದ್ದುಗೊಳಿಸಲಾಗಿದ್ದ ದಿನಾಂಕ 13-5-2017 ರಂದು ನಡೆದ ಡಿ. ಫಾರ್ಮ ಪ್ರಥಮ ವರ್ಷದ 360 - **Health Education and Community Pharmacy (HECP)** ವಿಷಯದ ಮರು ಪರೀಕ್ಷೆಯನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ದಿನಾಂಕ **30-05-2017** ರಂದು ನಡೆಸಲಾಗುತ್ತಿದೆ ಎಂದು ಔಷಧ ನಿಯಂತ್ರಕರು, ಕರ್ನಾಟಕ ರಾಜ್ಯ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಐತಿಹಾಸಿಕ ದಾಖಲೆಗಳ ಸಂರಕ್ಷಣೆ ನೆರವಿಗೆ ಅರ್ಜಿ ಆಹ್ವಾನ

ಬೆಂಗಳೂರು, ಮೇ 24 (ಕರ್ನಾಟಕ ವಾರ್ತೆ)-

ರಾಷ್ಟ್ರೀಯ ಪತ್ರಾಗಾರ, ನವದೆಹಲಿ ಇವರು 2017-18 ನೇ ಸಾಲಿಗೆ ಕೇಂದ್ರ ಹಣಕಾಸು ನೆರವಿನ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿನ ಐತಿಹಾಸಿಕ ದಾಖಲೆಗಳ ಸಂರಕ್ಷಣೆ, ಹಸ್ತಪ್ರತಿಗಳು, ಅಪರೂಪದ ಪುಸ್ತಕಗಳು, ಅಮೂಲ್ಯ ದಾಖಲೆಗಳು ಐತಿಹಾಸಿಕ ದಾಖಲೆಗಳು, ಪತ್ರಾಗಾರಕ್ಕೆ ಯೋಗ್ಯವಾದ ಛಾಯಾಚಿತ್ರಗಳು, ಮುದ್ರಣಗಳನ್ನು ಜೋಪಾನ ಪಡಿಸುವಿಕೆ/ಸಂರಕ್ಷಿಸುವಿಕೆ, ದುರಸ್ತಿ, ಪ್ರಕಟಣೆ, ಪಟ್ಟಿ ಮಾಡುವಿಕೆ, ಮಾರ್ಗದರ್ಶಕಗಳ ಸಂಗ್ರಹಣೆ, ಮೈಕ್ರೋಫಿಲ್ಮಿಂಗ್ ಹಾಗೂ ಡಿಜಿಟೈಜ್ ಇವುಗಳ ದುರಸ್ತಿ ಮತ್ತು ನವೀಕರಣಗೊಳಿಸುವುದಕ್ಕಾಗಿ ಕಂಪ್ಯೂಟರ್/ವ್ಯಾಕ್ಯೂಂಕ್ಲೀನರ್/ಸ್ಕ್ಯಾನರ್/ರೆಪ್ರೋಗ್ರಾಫಿ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ನೋಂದಾಯಿತ ಸ್ವಯಂ ಸಂಘ/ಸಂಸ್ಥೆಗಳು, ವ್ಯಕ್ತಿಗಳು, ವಿಶ್ವವಿದ್ಯಾಲಯಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಯೋಜನೆಯಡಿ ವಿಸ್ತರಿಸಬಹುದಾದ ಹಣಕಾಸು ನೆರವಿನ ಗರಿಷ್ಠ ಮಿತಿಯು ರೂ. 10.00 ಲಕ್ಷ (ಹತ್ತು ಲಕ್ಷ ಮಾತ್ರ) ವಾಗಿರುತ್ತದೆ ಮತ್ತು ಯೋಜನೆಯು ಒಟ್ಟು ವೆಚ್ಚದ 75:25 ಅನುಪಾತದಲ್ಲಿರುತ್ತದೆ. (ಅಂದರೆ ಕೇಂದ್ರ ಸರ್ಕಾರದ ಪಾಲು 75% ರಷ್ಟು ಮತ್ತು ಸಂಘ/ಸಂಸ್ಥೆಗಳ ಪಾಲು 25 ರಷ್ಟು)

ನಿಗದಿತ ಅರ್ಜಿ ನಮೂನೆ ಹಾಗೂ ವಿವರಗಳಿಗೆ ರಾಷ್ಟ್ರೀಯ ಪತ್ರಾಗಾರ, ನವದೆಹಲಿಯ ಅಂತರ್ಜಾಲ **www.national archives.nic.in Section Grants-in-aid on home page** ಹಾಗೂ **www.karnataka state archives.com** ನಿಂದ ಪಡೆದು ಭರ್ತಿಮಾಡಿ ಸಲ್ಲಿಸುವುದು.

ರಾಜ್ಯ ಮಟ್ಟದ ಶೋಧಕ ಸಮಿತಿಯು ಆಹ್ವಾನಿತ ಅರ್ಜಿಗಳನ್ನು ಪರಿಶೀಲಿಸಿ, ಸೂಕ್ತ ಆಯ್ಕೆ ಪಟ್ಟಿಯನ್ನು ಛೇರ್ಮನ್, ಗ್ರಾಂಟ್ಸ್ ಕಮಿಟಿ ಅಂಡ್ ಡೈರೆಕ್ಟರ್ ಜನರಲ್ ನ್ಯಾಷನಲ್ ಆರ್ಕಿವ್ಸ್ ಆಫ್ ಇಂಡಿಯಾ, ಜನಪಥ್ ನವದೆಹಲಿ **-110 001** ಇವರಿಗೆ ಕಳುಹಿಸಲಾಗುವುದು.

ನಿಗದಿತ ನಮೂನೆಯಲ್ಲಿರುವ ಅರ್ಜಿಗಳನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಮೊದಲನೆ ಮಹಡಿ, ಕೊಠಡಿ ಸಂ. **126**, ವಿಕಾಸ ಸೌಧ, ಬೆಂಗಳೂರು**-01** ಇವರಿಗೆ ದಿನಾಂಕ **15-06-2017** ರಂದು ಸಂಜೆ **5.00** ಗಂಟೆ ಒಳಗೆ ತಲುಪಿಸಲು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಮಲಪ್ರಭ ಕಾಲುವೆಗಳ ಸಂಪೂರ್ಣ ಆಧುನೀಕರಣ

ಬೆಂಗಳೂರು, ಮೇ 24 (ಕರ್ನಾಟಕ ವಾರ್ತೆ)-

ಮಲಪ್ರಭ ಯೋಜನೆಯ ಎಡ ಮತ್ತು ಬಲದಂಡೆ ಕಾಲುವೆಗಳು ಅತ್ಯಂತ ದುಸ್ಥಿತಿಯಲ್ಲಿದ್ದು ಸಮರ್ಪಕವಾಗಿ ನೀರು ದೊರೆಯದ ಕಾರಣ ರೈತರು ತೊಂದರೆಯಲ್ಲಿರುವುದು ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರ ಕಾಳಜಿ ವಹಿಸಿ ಕಾಮಗಾರಿಯನ್ನು ತ್ವರಿತ ರೀತಿಯಲ್ಲಿ ಮುಗಿಸುತ್ತದೆ.

ಮಲಪ್ರಭ ಬಲದಂಡೆ ಕಾಲುವೆಯಲ್ಲಿ ಎಲೆ ಮಣ್ಣಿನ ಪ್ರದೇಶದಲ್ಲಿ ಹಾದುಹೋಗುತ್ತಿದ್ದು, ಈ ಮೊದಲು ಕಾಲುವೆ ನಿರ್ಮಾಣವನ್ನು ಮುರಂ ಪದರವನ್ನು ಒದಗಿಸಿ ಕಾಲುವೆ ತಳದಲ್ಲಿ ಕಾಂಕ್ರೀಟ್ ಒದಗಿಸಿ, ಬದಿಗಳಿಗೆ ಪಿ.ಸಿ.ಸಿ. ಸ್ಲ್ಯಾಬ್‌ಗಳನ್ನು ಒದಗಿಸಲಾಗಿತ್ತು. ಈ ಕಾಲುವೆಯ ಲೈನಿಂಗ್ ಸುಮಾರು 25 ವರ್ಷಗಳ ಹಿಂದ ನಿರ್ಮಿಸಿದ್ದು ಎರೆ ಮಣ್ಣಿನ ಗುಣಧರ್ಮದಿಂದ ಕುಗ್ಗುವಿಕೆ ಹಾಗೂ ಹಿಗ್ಗುವಿಕೆ ಪರಿಣಾಮದಿಂದ ಬಹಳಷ್ಟು ಕಡೆ ಕಾಲುವೆ ಹಾಳಾಗಿದ್ದು ದುಸ್ಥಿತಿಯಲ್ಲಿದೆ ಎಂದು ಬಹೃತ್ ನೀರಾವರಿ ಸಚಿವ ಎಂ.ಬಿ. ಪಾಟೀಲ್ ತಿಳಿಸಿದರು.

ಇಂದು ವಿಧಾನ ಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ಕಾಲುವೆ ಆಧುನೀಕರಣ ಮಾಡಿ ಮುಖ್ಯ ಕಾಲುವೆ ಹಾಗೂ ಹಂಚು ಕಾಲುವೆಗಳ ಮುಖಾಂತರ ನೀರನ್ನು ತ್ವರಿತವಾಗಿ ಹಾಗೂ ಸರಾಗವಾಗಿ ನೀರು ಹರಿಸಲು ಮತ್ತು ಕಾಲುವೆಗಳಲ್ಲಿ ನೀರು ಇಂಗುವುದನ್ನು ತಡೆಗಟ್ಟಿ ನೀರು ಉಳಿತಾಯ ಮಾಡಿ ಅಚ್ಚುಕಟ್ಟಿನ ಕೊನೆಯ ಭಾಗದವರೆಗೆ ನೀರನ್ನು ಹರಿಸುವ ಉದ್ದೇಶವಿದೆ. ಮಲಪ್ರಭ ಯೋಜನೆಯಲ್ಲಿ ನೀರಿನ ಲಭ್ಯತೆಯ ಕೊರತೆಯಿದ್ದು, ಲಭ್ಯವಿರುವ ನೀರನ್ನು ಸಮರ್ಪಕವಾಗಿ ಬಳಸುವ ಅವಶ್ಯಕತೆ ಇದೆ ಎಂದರು.

ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ಸಲಹೆಯ ಮೇರೆಗೆ ಡಿಪಿಆರ್‌ನ್ನು 1120.00 ಕೋಟಿಗಳಿಗೆ ರೂ.ಗಳಿಗೆ ತಯಾರಿಸಲಾಗಿದ್ದು, ಇದಕ್ಕೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆದು, ಟೆಂಡರ್ ಕರೆದು ತ್ವರಿತವಾಗಿ ಮತ್ತು ಪಾರದರ್ಶಕವಾಗಿ ಕಾಮಗಾರಿ ಪೂರ್ಣಗೊಳಿಸಿ ಆ ಭಾಗದ 4 ಜಿಲ್ಲೆಗಳ ಜನರಿಗೆ ಅನುಕೂಲವಾಗುವ ರೀತಿ ಮಾಡುತ್ತೇವೆ ಎಂದು ತಿಳಿಸಿದರು.

## ರೇಷ್ಮೆ ನೂಲು ಬಿಚ್ಚಣಿಕೆಯಲ್ಲಿ ಉದ್ಯಮಶೀಲತಾ ತರಬೇತಿಗಾಗಿ ಅರ್ಜಿ

ಬೆಂಗಳೂರು, ಮೇ 24, (ಕರ್ನಾಟಕ ವಾರ್ತೆ)

ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸಲು ಕೇಂದ್ರ ರೇಷ್ಮೆ ಮಂಡಳಿಯು ಆಯೋಜಿಸುವ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಒಂದು ತಿಂಗಳ ಅವಧಿಗೆ ಗ್ರಾಮೀಣ ಪ್ರದೇಶದ ಡಿಪ್ಲೋಮಾದಾರರಿಗೆ ತರಬೇತಿ ಆರ್ಥಿಕ ನೆರವು ಒದಗಿಸಲು ಉದ್ದೇಶಿಸಿದೆ.

**ತರಬೇತಿಯು 4 ವಾರಗಳ ಅವಧಿಯದ್ದಾಗಿದ್ದು, ಪ್ರಾಯೋಗಿಕ ಹಾಗೂ ಉದ್ಯಮಶೀಲತಾ ಅಂಶಗಳನ್ನೊಳಗೊಂಡಿದೆ. ಕೇಂದ್ರ ರೇಷ್ಮೆ ತಾಂತ್ರಿಕತೆ ಮತ್ತು ಸಂಶೋಧನಾ ಸಂಸ್ಥೆ, ಮಡಿವಾಳ, ಬೆಂಗಳೂರು ಇಲ್ಲಿ ತರಬೇತಿ ನಡೆಸಲಾಗುವುದು.**

**ತರಬೇತಿಗೆ ಅರ್ಜಿ ಸಲ್ಲಿಸುವವರು ಕನಿಷ್ಠ ಡಿಪ್ಲೋಮ ಪಡೆದಿರಬೇಕು. ತರಬೇತಿಯು ಉಚಿತವಾಗಿದ್ದು, ತರಬೇತಿ ಅವಧಿಯಲ್ಲಿ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಒದಗಿಸಲಾಗುವುದು. ತರಬೇತಿ ಅವಧಿಯಲ್ಲಿ ಕಡ್ಡಾಯವಾಗಿ ತರಬೇತಿ ಸಂಸ್ಥೆಯಲ್ಲಿಯೇ ತಂಗಿರಬೇಕು. ತರಬೇತಿ ಪಡೆದ ನಂತರ ಶಿಕ್ಷಣಾರ್ಥಿಗಳು ಸ್ವಂತವಾಗಿ ರೀಲಿಂಗ್ ಉದ್ದಿಮೆ ಪ್ರಾರಂಭಿಸಬಹುದು ಹಾಗೂ ಇಲಾಖೆಯಿಂದ ಸ್ಥಾಪಿತವಾಗುವ ರೀಲಿಂಗ್ ಪಾರ್ಕ್‌ಗಳಲ್ಲಿ ಸ್ವಂತ ಉದ್ದಿಮೆ ಪ್ರಾರಂಭಿಸಲು ಆದ್ಯತೆ ನೀಡಲಾಗುವುದು.**

**ತರಬೇತಿಗೆ ಹಾಜರಾಗಲು ಇಚ್ಛಿಸುವವರು ಆಯಾ ಜಿಲ್ಲೆಯ ರೇಷ್ಮೇ ಉಪ ನಿರ್ದೇಶಕರನ್ನು ಸಂಪರ್ಕಿಸಿ ಅರ್ಜಿ ನಮೂನೆ ಮತ್ತು ಮಾಹಿತಿ ಪಡೆಯುವುದು ಅಥವಾ ಇಲಾಖೆ ವೆಬ್‌ಸೈಟ್: http://www.silk.kar.nic.in ಅಥವಾ http://www.karnataka.gov.in/sericulture ನಲ್ಲಿ ಅರ್ಜಿ ನಮೂನೆ ಮತ್ತು ಮಾಹಿತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ 9900881100 ಅನ್ನು ಸಂಪರ್ಕಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31-5-2017.**

## ಆಡು, ಕುರಿಗಳಿಗೆ ಲಸಿಕೆ ಹಾಕಿಸಲು ಮನವಿ

**ಬೆಂಗಳೂರು, ಮೇ 24, (ಕರ್ನಾಟಕ ವಾರ್ತೆ)**

ಆಡು, ಕುರಿಗಾರರು ಸ್ಥಳೀಯ ಪಶುಪಾಲನಾ ಇಲಾಖೆಯ ಸಂಸ್ಥೆಗಳನ್ನು ಸಂರ್ಪಕಿಸಿ ಉಚಿತವಾಗಿ ಕರುಳು ಬೇನೆ ಲಸಿಕೆಯನ್ನು ಹಾಕಿಸಿಕೊಳ್ಳಬೇಕೆಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಇವರು ಮನವಿ ಮಾಡಿದ್ದಾರೆ.

ಈ ಸಾರಿ ಮಳೆಗಾಲ ತುಂಬಾ ಚೆನ್ನಾಗಿ ಆರಂಭಗೊಂಡಿದೆ. ಮಳೆ ಬಂದ ನಂತರ ಕುರಿ, ಆಡುಗಳಿಗೆ ಬರುವ ಕರುಳುಬೇನೆಯನ್ನು ತಡೆಗಟ್ಟಲು ಕರುಳುಬೇನೆ ಲಸಿಕೆಯನ್ನು ಕುರಿ, ಆಡುಗಳಿಗೆ ಹಾಕಿಸುವುದು ಅಗತ್ಯವಾಗಿರುತ್ತದೆ.

ಈ ಸಂಬಂಧ ಆಯಾಯ ಜಿಲ್ಲೆಯ ಬೇಡಿಕೆಗೆ ಅನುಗುಣವಾಗಿ ಸಾಕಷ್ಟು ಲಸಿಕೆಯನ್ನು ಉತ್ಪಾದಿಸಲಾಗಿದೆ. ಅವುಗಳನ್ನು ಈಗಾಗಲೇ ನಿಮ್ಮ ಸ್ಥಳಿಯ ಪಶುಆಸ್ಪತ್ರೆ, ಪಶುಚಿಕಿತ್ಸಾಲಯ, ಪ್ರಾಥಮಿಕ ಪಶುಚಿಕಿತ್ಸಾಲಯ ಕೇಂದ್ರಗಳಿಗೆ, ಕುರಿ, ಆಡುಗಳ ಸಂಖ್ಯೆಗಳಿಗೆ ಅನುಗುಣವಾಗಿ ಪಶುಆರೋಗ್ಯ ಮತ್ತು ಜೈವಿಕ ಸಂಸ್ಥೆಯಿಂದ ಪೂರೈಸಲಾಗಿದೆ.

ಆಡು, ಕುರಿ ಸಾಕಾಣಿಕೆದಾರರು ಲಸಿಕೆಗೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಟೋಲ್ ಫ್ರೀ ಸಂಖ್ಯೆ ಪಶುಪಾಲನಾ ಇಲಾಖೆ ಸಹಾಯವಾಣಿ 080–23417100 ಸಂಪರ್ಕಿಸಿ ಸಮಾಲೋಚಿಸಬಹುದಾಗಿದೆ.